# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 959
2. ಸದಸ್ಯರ ಹೆಸರು : ಶ್ರೀ ಅ. ದೇವೇಗೌಡ
3. ಉತ್ತರಿಸಬೇಕಾದ ದಿನಾಂಕ : 22.02.2024
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿಗೆ ಹೇಮಾವತಿ ನದಿಯಿಂದ ನಾಲೆಯ ಮೂಲಕ ಕೆರೆಗಳಿಗೆ ನೀರನ್ನು ಹರಿಸುವ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ:</td><td rowspan="2">ತುಮಕೂರು ಶಾಖಾ ನಾಲೆಯ ಸರಪಳಿ 192.30 ಕಿ.ಮೀ ನಿಂದ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ 83 ಕೆರೆಗಳಿಗೆ ಹಾಗೂ ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು ಹುತ್ರಿದುರ್ಗ ಹೋಬಳಿಯ ಕೆರೆಗಳಿಗೆ ಕುಡಿಯುವ ನೀರೊದಗಿಸುವ ಯೋಜನೆಯ ಕಾಮಗಾರಿಯು ಪ್ರಗತಿಯಲ್ಲಿದ್ದು, ಪ್ರಸ್ತುತ ಹಂತದ ವಿವರ, ಯೋಜನೆಯ ವಿಳಂಬಕ್ಕೆ ಕಾರಣಗಳು ಹಾಗೂ ಪೂರ್ಣಗೊಳಿಸಲು ಕೈಗೊಂಡ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>2014ರಲ್ಲಿ ಪ್ರಾರಂಭವಾದ ಈ ಕಾಮಗಾರಿಯು ಪೂರ್ಣಗೊಳ್ಳಲು ವಿಳಂಬವಾಗುತ್ತಿದ್ದು, ಕಾಮಗಾರಿಯು ತ್ವರಿತವಾಗಿ ಪೂರ್ಣಗೊಳ್ಳಲು ಸರ್ಕಾರ ಏನು ಕ್ರಮ ಕೈಗೊಂಡಿದೆ:</td></tr>
<tr><td>ಇ)</td><td>ಮಾಗಡಿ ತಾಲ್ಲೂಕಿನ ಕೆರೆಗಳಿಗೆ ನೀರಿನ ಬವಣೆ ಹೆಚ್ಚಾಗಿದ್ದು, ಹೇಮಾವತಿ ನದಿಯಿಂದ ನಾಲೆಯ ಮೂಲಕ ನೀರು ಹರಿಸುವ ಕುಡಿಯುವ ನೀರಿನ ಕಾಮಗಾರಿಯು ಪೂರ್ಣಗೊಳ್ಳಲು ಇನ್ನು ಎಷ್ಟು ಕಾಲಾವಧಿ ಬೇಕಾಗುತ್ತದೆ? (ವಿವರ ನೀಡುವುದು)</td><td>ರೈತರಿಗೆ ಭೂಸ್ವಾಧೀನ ಪರಿಹಾರ ಮೊತ್ತವನ್ನು ಸಂದಾಯ ಮಾಡುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಇನ್ನಿತರ ರೈಲ್ವೇ ಇಲಾಖೆಯ ಹಾಗೂ ಅರಣ್ಯ ಇಲಾಖೆಯ ಅನುಮೋದನೆ ಪಡೆಯುವ ಪ್ರಕ್ರಿಯೆಯು ಜಾರಿಯಲ್ಲಿದ್ದು, ಕಾಮಗಾರಿಯನ್ನು ಜೂನ್-2024ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.</td></tr>
</table>

**ಜಸಂಇ: 12 ಎನ್‌ಎಲ್‌ಎ 2024**

**(ಡಿ. ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**

# ಅನುಬಂಧ

**ತುಮಕೂರು ಶಾಖಾ ನಾಲೆಯ ಸರಪಳಿ 192.30 ಕಿ.ಮೀ ನಿಂದ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ 83 ಕೆರೆಗಳಿಗೆ ಹಾಗೂ ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು ಹುತ್ರಿದುರ್ಗ ಹೋಬಳಿಯ ಕೆರೆಗಳಿಗೆ ಕುಡಿಯುವ ನೀರೊದಗಿಸುವ ಯೋಜನೆಯ ಕಾಮಗಾರಿಯ ವಿವರ**

**ಕಾಮಗಾರಿಯ ಪ್ರಸ್ತುತ ಹಂತದ ವಿವರಗಳು:**

- ಗುತ್ತಿಗೆ ಮೊತ್ತ ರೂ.324.67 ಕೋಟಿ.
- ಪಂಪ್ ಹೌಸ್ ಕಾಮಗಾರಿ ಪೂರ್ಣಗೊಂಡಿರುತ್ತದೆ.
- ರೈಸಿಂಗ್ ಮೇನ್-1 ರ 22.41 ಕಿ.ಮೀ. ಪೈಪ್‌ಗಳ ಉದ್ದದ ಪೈಕಿ 20.56 ಕಿ.ಮೀ.ಗಳ ಪೈಪ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುತ್ತದೆ.
- ರೈಸಿಂಗ್ ಮೇನ್-2 ರ 15.50 ಕಿ.ಮೀ. ಪೈಪ್‌ಗಳ ಉದ್ದದ ಪೈಕಿ 13.60 ಕಿ.ಮೀಗಳ ಪೈಪ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುತ್ತದೆ.
- 66/11 ಕೆ.ವಿ. ಎಕ್ಸಪ್ರೆಸ್ ಫೀಡರ್ ಲೈನ್‌ನ 1.20 ಕಿ.ಮೀ. ಉದ್ದವಿದ್ದು, 10 ಟವರ್ ಹೊಂದಿದ್ದು ಕಾಮಗಾರಿ ಪೂರ್ಣಗೊಂಡಿದೆ.
- 2 ಸಂಖ್ಯೆಯ 10 ಎಂ.ವಿ.ಎ ಮತ್ತು 1 ಸಂಖ್ಯೆಯ 250 ಕೆ.ವಿ.ಎ ಸಾಮರ್ಥ್ಯದ ಟ್ರಾನ್ಸ್ ಫಾರ್ಮರ್ ಗಳು ಅವಶ್ಯಕತೆ ಇದ್ದು, ಗುಣಮಟ್ಟ ಪರೀಕ್ಷೆ ಮಾಡಿ ಸ್ಥಳಕ್ಕೆ ಸರಬರಾಜು ಮಾಡಲಾಗಿರುತ್ತದೆ.
- 66/6.6 ಕೆ.ವಿ ಸಬ್‌ಸ್ಟೇಷನ್‌ನ ಸಿವಿಲ್ ಕಾಮಗಾರಿಗಳು ಮುಗಿದಿದ್ದು, ವಿದ್ಯುತ್ ಉಪಕರಣಗಳನ್ನು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ.
- ಫೋರ್‌ಬೆ ಮತ್ತು ಮ್ಯಾನಿಫೋಲ್ಡ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
- 463.00 ಮೀ ಉದ್ದದ ಇನ್‌ಟೇಕ್ ಕಾಮಗಾರಿ ಹಾಗೂ ಸಂಬಂಧಿಸಿದ Head Regulator, ಒಟ್ಟು 6 ಡೆಲಿವರಿ ಛೇಂಬರ್ಸ್ ಹಾಗೂ 227.50 ಕಿ.ಮೀ ಉದ್ದದ ಗ್ರಾವಿಟಿ ಮೈನ್ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ.
- ಮಾಗಡಿ ಹಾಗೂ ಕುಣಿಗಲ್ ತಾಲ್ಲೂಕಿಗೆ ಸಂಬಂಧಿಸಿದಂತೆ ಭೂಸ್ವಾಧೀನಕ್ಕಾಗಿ ಅಗತ್ಯವಿರುವ ಅನುದಾನವನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ರಾಮನಗರ ಹಾಗೂ ತುಮಕೂರು ರವರಿಗೆ ಈಗಾಗಲೆ ಬಿಡುಗಡೆ ಮಾಡಲಾಗಿದ್ದು, ದಾಖಲೆಗಳನ್ನು ಸಲ್ಲಿಸುವ ರೈತರಿಗೆ ಪರಿಹಾರ ಪಾವತಿಸಲು ಕ್ರಮವಹಿಸಲಾಗುತ್ತಿದೆ.
- ಈ ಯೋಜನೆಗೆ ಈವರೆವಿಗೂ ರೂ.175.46 ಕೋಟಿಗಳ ವೆಚ್ಚವಾಗಿರುತ್ತದೆ.

ಪುಟ-2 ಕ್ಕೆ

**ಕಾಮಗಾರಿಯ ವಿಳಂಬಕ್ಕೆ ಕಾರಣಗಳು:**

- ಗ್ರಾವಿಟಿ ಮೇನ್‌ನಲ್ಲಿ PSC ಪೈಪುಗಳ ಬದಲಿಗೆ MS & DI ಪೈಪುಗಳನ್ನು ಅಳವಡಿಸಲು ಯೋಜನೆಯನ್ನು ಮಾರ್ಪಡಿಸಲಾಗಿದ್ದರಿಂದ;
- ಭೂಸ್ವಾಧೀನ ಪ್ರಕ್ರಿಯೆಯಿಂದ ಆಗುವ ಕಾಮಗಾರಿಯ ವಿಳಂಬವನ್ನು ತಪ್ಪಿಸಲು 227.00 ಕಿ.ಮೀ. ಉದ್ದದ ಗ್ರಾವಿಟಿ ಮೈನ್ ಪೈಪನ್ನು ರಸ್ತೆ ಬದಿಯಲ್ಲಿ ಅಳವಡಿಸಲು ಯೋಜನೆಯನ್ನು ಮಾರ್ಪಡಿಸಲಾಗಿದ್ದರಿಂದ;
- ಕಾಮಗಾರಿಯ ಪಂಪ್‌ಹೌಸ್ ಮತ್ತು ವಿದ್ಯುತ್ ಸಬ್‌ಸ್ಟೇಷನ್ ನಿರ್ಮಿಸಲು ಉದ್ದೇಶಿಸಿರುವ, ಸರ್ವೆ ನಂ. 53/1 ರ 3 ಎಕರೆ 15 ಗುಂಟೆ ವಿಸ್ತೀರ್ಣ ಪ್ರದೇಶವು ಖಾಸಗಿ ಜಮೀನಾಗಿದ್ದು, ಭೂಮಾಲೀಕರು ಜಮೀನನ್ನು ಬಿಟ್ಟುಕೊಡಲು ಒಪ್ಪದಿದ್ದ ಕಾರಣ, ಸಮೀಪದಲ್ಲೇ ಇದ್ದ ಸರ್ಕಾರದ ಕೆರೆಯ ಅಂಗಳಕ್ಕೆ ಸ್ಥಳ ಬದಲಾಯಿಸಿದ್ದರಿಂದ;
- Land Acquisition Act, 2013ರ ಪ್ರಕಾರ SIA ವರದಿ ಅನುಮೋದನೆ ಪಡೆಯುವ ಪ್ರಕ್ರಿಯೆಯು ವಿಳಂಬವಾಗಿರುವುದರಿಂದ;

**ಕಾಮಗಾರಿಯನ್ನು ಪೂರ್ಣಗೊಳಿಸಲು ಕೈಗೊಂಡ ಕ್ರಮಗಳು:**

- ದಾಖಲೆಗಳನ್ನು ಸಲ್ಲಿಸುವ ರೈತರಿಗೆ ಮಾಗಡಿ ಮತ್ತು ಕುಣಿಗಲ್ ತಾಲ್ಲೂಕಿನಡಿ ಪರಿಹಾರ ಮೊತ್ತವನ್ನು ಪಾವತಿಸಲು ಕ್ರಮ ಜರುಗಿಸಲಾಗುತ್ತಿದೆ.
- ರೈಸಿಂಗ್ ಮೈನ್ -1 ಹಾಗೂ ಗ್ರಾವಿಟಿ ಮೈನ್ ರಾಷ್ಟ್ರೀಯ ಹೆದ್ದಾರಿ-75 ರ 44.55 ಕಿ.ಮೀ., 50.10 ಕಿ.ಮೀ., 50.15 ಕಿ.ಮೀ. ಮತ್ತು 55.72 ಕಿ.ಮೀ. ಗಳಲ್ಲಿ ಹಾದು ಹೋಗುತ್ತಿದ್ದು, ಭಾರತದ ರಾಷ್ಟ್ರೀಯ ಹೆದ್ದಾರಿ, ಹಾಸನ ಇವರಿಂದ ದಿನಾಂಕ:10.01.2024 ರಲ್ಲಿ ಒಪ್ಪಿಗೆ ಪಡೆಯಲಾಗಿದೆ.
- ಪೈಪ್‌ಲೈನ್‌ನ ರೈಲ್ವೇ ಕ್ರಾಸಿಂಗ್ ಅನುಮತಿಗಾಗಿ ದಕ್ಷಿಣ-ಪಶ್ಚಿಮ ರೈಲ್ವೇಸ್ ರವರಿಂದ ಅನುಮೋದನೆ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
- ರೈಸಿಂಗ್ ಮೈನ್ ಹಾಗೂ ಗ್ರಾವಿಟಿ ಮೈನ್ ಸುಮಾರು 1.00 ಕಿ.ಮೀ. ಗೆ, ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

*****